ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮಿಖ್ಯ ಆದ್ದು. [ಸಂ. 38.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ|| 24, ಸಕ 1903.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೇಲ್ ಜಡ್ಜ್‌ರು ಮಗೈರೇದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು 3ನೆ ಸೆಪ್ಟಂಬರ್ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ :—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದ ಆಡಳಿತದಲ್ಲಿರುವ ಸ್ಟೇಟ್ ಫಾರೆಸ್ಟ್ ರಿಜರ್ವ್ಡ್ ಜವಿನು ಮತ್ತು ಪ್ಲಾಂಟೇಷನ್‌ಗಳ ದೇಶೀಲು ಎಲ್ಲಾ ಜವಿನುಗಳಲ್ಲಿಯೂ 1903—1904ನೆ ಸಾಲಿನಲ್ಲಿ ದೊರೆಯುವ ಈ ಕೆಳಗೆ ಕಂಡ ಪಸಾರೆ ಜಿನಸುಗಳನ್ನು ತಾಲ್ಲೂಕ್‌ವಾರ್, ಹೋಬಳಿವಾರ್, ಜಂಗಲ್‌ವಾರ್, ಅಥವಾ ಮತ್ಯಾವರೀತಿಯಲ್ಲಿ ದರೂ ಡಿಸ್ಟ್ರಿಕ್ಟ್ ಫಾರೆಸ್ಟ್ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಈ ಕೆಳಗೆ ಪಟ್ಟಿಯಲ್ಲಿ ನಮೂದಿರುವ ಸ್ಥಳಗಳಲ್ಲಿ ಆಯಾಯ ತಾರೀಖಿನಲ್ಲಿ ತಾಲ್ಲೂಕು ಅಮಲ್ದಾರ್‌ರವರು ಜೊತೆಯಲ್ಲಿ ಹರಾಜು ಮಾಡಿಸುತ್ತಾರೆ. ನಿಯಮಿಸಿದ ದಿನವು ಹರಾಜು ಮಧ್ಯಾಹ್ನ 12 ಘಂಟೆಗೆ ಸುರು ಮಾಡಲ್ಪಡುವುದು.

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಸ್ಥಳ.
1	ಮಾಲೂರ್	23ನೆ ಅಕ್ಟೋಬರ್ 1903.	
2	ಕೋಲಾರ್	26 ಡಿಟೋ	
3	ಮುಳಬಾಗಲು	28 ಡಿಟೋ	
4	ಬವರಿಂಗ್‌ಪ್ಯಾಟೆ	30 ಡಿಟೋ	
5	ಶ್ರೀನಿವಾಸಪುರ	2ನೆ ನವಂಬರ್	
6	ಚಿಂತಾಮಣಿ	6 ಡಿಟೋ	
7	ಶಿಡ್ಲಘಟ್ಟ	7 ಡಿಟೋ	
8	ಚಿಕ್ಕಬಳ್ಳಾಪುರ	10 ಡಿಟೋ	
9	ಗೌರೀಬಿದನೂರು	12 ಡಿಟೋ	
10	ಗುಡಿಬಂಡೆ ಸಬ್ ತಾಲ್ಲೂಕು	14 ಡಿಟೋ	
11	ಬಾಗೇಪಲ್ಲಿ	16 ಡಿಟೋ	

ಪಸಾರೆ ದಿನಸುಗಳ ತಪಸೀಲು.

1. ಹುಣಸೇಹಣ್ಣು
2. ಹೊಂಗೇಕಾಯಿ
3. ತೇಗೇಕಾಯಿ
4. ಗೋಂದು
5. ಜೇನುತುಪ್ಪ
6. ಜೇನುಮೇಣ
7. ಕಬಲಾರಂಗು
8. ಗೇರುಪಪ್ಪು
9. ಬ್ಯಾಲದಹಣ್ಣು
10. ಕಲ್ಲುಹುವ್ವು
11. ಮರಡೀ ಬೀಜ ಅಥವಾ ಚಾರುಪಪ್ಪು
12. ತಾರೇಕಾಯಿ
13. ಹೊಟ್ಲೀಚಕ್ಕೆ
14. ಅಳಲೇಕಾಯಿ

ಷರಾದಲ್ಲಿಲ್ಲದ ಡಿಸ್ಟ್ರಿಕ್ಟ್ ಫಾರೆಸ್ಟ್ಟುಗಳಲ್ಲಿ ದೊರಯಬಹುದಾದ 1—2—3ನೆ ನಂಬರು ದಿನಸುಗಳು ಅವಶ್ಯಕವಿದ್ದಲ್ಲಿ ಆಲಾಹಿದಾ ಹರಾಜು ಮಾಡಿಸಲ್ಪಡುವವು

2. ಛಡ ಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಪಾವತೀ ಮಾಡಬೇಕು. ತಪ್ಪಿದರೆ ಛಡ ಸವಾಲ್ದಾರನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಿಸಲ್ಪಡುವದು. ದುಸರಾ ಹರಾಜಿನಲ್ಲಿ ಛಡ ಸವಾಲ್ ಮೊಬಲಗು ಕಮ್ಮಿಯಾಗಿದ್ದಲ್ಲಿ ಕಮ್ಮಿಯಾಗುವ ಮೊಬಲಗನ್ನು ಅವನಿಂದ ರೆವಿನ್ಯೂ ಬಾಕಿಯಂತೆ ಭಾವಿಸಿ ವಸೂಲ್ಮಾಡಲ್ಪಡುವದು. ಆದರೆ ದುಸರಾ ಹರಾಜಿನಲ್ಲಿ ಫಾಯಿದೆ ಉಂಟಾದ್ದಲ್ಲಿ ಅದಕ್ಕೆ ಅವನಿಗೆ ಯಾವ ಹಕ್ಕು ಇರುವದಿಲ್ಲ. ಹರಾಜು ಮುಂಜೂರಾದ ಸಂಗತಿಯನ್ನು ಛಡ ಸವಾಲ್ದಾರನಿಗೆ ತಿಳಿಯಪಡಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ಮೊದಲು ಠೇವಣಿ ಕಟ್ಟಿದ ಕಾಲು ಹಿಸ್ಸೆಯನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಬಾಬು ದುಸರಾ ಹರಾಜು ಮಾಡಲ್ಪಡುವದಲ್ಲದೆ ಛಡ ಸವಾಲ್ದಾರನಿಗೆ ಬಾಬಿನಲ್ಲಿ ಯಾವ ಹಕ್ಕು ಇರುವದಿಲ್ಲ. ಪೂರಾ ಹಣ ಪಾವತಿ ಮಾಡಿದ ನಂತರ ಹರಾಜು ವೇಳೆಯಲ್ಲಿ ತಿಳಿಸಲ್ಪಡುವ ಕೆಲವು ಷರತ್ತುಗಳನ್ನು ನಮೂದಿಸಿ ಛಡ ಸವಾಲ್ದಾರನು ಮುಚ್ಚಳಿಕೆ ಬರೆದು ಕೊಟ್ಟ ಹೊತ್ತು ಬಾಬನ್ನು ರೂಢಿಸಲು ಅವನಿಗೆ ಅಪ್ಪಣೆ ದೊರಿಯಲಾರದು. ಹರಾಜು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ ಪಾವತಿ ಮಾಡಬೇಕು.

3. ಈ ಹರಾಜು ಫಾರೆಸ್ಟು ಇಲಾಖೆಯಲ್ಲಿ ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಹಿಡುವಳಿ ಜಮೀನಲ್ಲಿ ಸ್ವಂತ ತೋಪುಗಳಲ್ಲಿಯೂ ಇರುವ ಫಸಲ್ ಕಂಟ್ರಾಕ್ಟರಿಗೆ ಸೇರಿದ್ದಲ್ಲ.

5. ಇನಾಂದಾರ್ರ ಹಕ್ಕಿನಲ್ಲಿ ಕಂಟ್ರಾಕ್ಟರು ಪ್ರವೇಶ ಮಾಡಕೂಡದು.

6. ಗ್ರಾಮ ಠಾಣಾಗಳಲ್ಲೂ, ಗ್ರಾಮ ತೋಪುಗಳಲ್ಲೂ, ಸ್ಮಶಾನ ಜಾಗಾಗಳಲ್ಲಿಯೂ ಮತ್ತು ರಸ್ತೆ ಸಾಲು ಮರಗಳಲ್ಲಿಯೂ ಇರುವ ಫಸಲು ಈ ಹರಾಜಿಗೆ ಸೇರಿದ್ದಲ್ಲಿ ಅವು ಅಮಲ್ದಾರ್ರುಗಳಿಂದ ರೆವಿನ್ಯೂ ಇಲಾಖೆ ಬಗ್ಯಾಗಿ ಆಲಾಹಿದಾ ಹರಾಜು ಮಾಡಲ್ಪಡುವವು.

7. ಫಸಲನ್ನು ರೂಢಿಸುವ ನೆಪದಮೇಲೆ ಇಜಾರೆದಾರನು ಮರಗಳನ್ನು ನಾಶಪಡಿಸಕೂಡದು.

8. ಹರಾಜು ಮಾಡಲ್ಪಟ್ಟ ದಿನಸುಗಳ ವಿನಹಾ ಮತ್ಯಾವ ದಿನಸುಗಳನ್ನು ಇಜಾರೆದಾರನು ರೂಢಿಸಕೂಡದು.

9. 1904ನೆ ಫೆಬ್ರವರಿ ಆಖೈರೊಳಗಾಗಿ ಹದ್ದುಬಸ್ತು ಗೊತ್ತಾಗಿರುವ ಫಾರೆಸ್ಟುಗಳಲ್ಲಿನ ಮತ್ತು ಪ್ಲಾಂಟೇಷ್ಣಗಳಲ್ಲಿನ ಫಸಲನ್ನು ಸಾಗಿಸಿಕೊಂಡು ಹೋಗಬೇಕು. ಅವುಗಳು ಬೆಂಕಿ ತಡೆ ಬಗ್ಯಾಗಿ ಆ ತಾರೀಖು ಲಾಗಾಯಿತು ಬಂದ್ ಮಾಡಲ್ಪಡುವವು. ಇತರ ಕಡೆಯಲ್ಲಿನ ಫಸಲುಗಳನ್ನು 1904ನೆ ಜೂನ್ ಆಖೈರ್ ವರಿಗೂ ಕಂಟ್ರಾಕ್ಟರು ರೂಢಿಸಿಕೊಳ್ಳಬಹುದು.

10. ಜಿನಸುಗಳನ್ನು ರೂಢಿಸುವದಕ್ಕೆ ಆಗಲೀ ಅಥವಾ ಮತ್ಯಾವ ಸಬಬಿನಿಂದಲೇ ಆಗಲೀ ಫಾರೆಸ್ಟು ಮತ್ತು ಪ್ಲಾಂಟೇಷ್ಣಗಳಿಗೆ ಬೆಂಕಿ ಇಡಕೂಡದು.

11. ಹರಾಜಿನಲ್ಲಿ ಸರಿಯಾದ ಸವಾಲ್ ಬಾರದಿದ್ದರೆ ಹರಾಜು ಮಾಡುವ ಆಫಿಸರು ಹರಾಜನ್ನು ಖೈದು ಮಾಡುವದಕ್ಕಾಗಲಿ ವಾ ಮುಂದೆ ಹರಾಜು ಮಾಡುವದಕ್ಕಾಗಲೀ ಸ್ವತಂತ್ರರಾಗಿರುತ್ತಾರೆ.

ಎಸ್. ಎ. ಬಾಪುರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 21ನೆ ಸೆಪ್ಟಂಬರ್ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈಡೂರು ಡಿಸ್ಟ್ರಿಕ್ಟಿಗೆ ಸೇರಿದ ಇದರಡೀ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜವಿುನುಗಳು ಅಡಗಿರುವ ಸರ್ಕಾರಿ ಬಂಜರು ಜವಿುನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟ್ಲ್ ಕಾವಲ್‌ಗಳಲ್ಲಿಯೂ ಗ್ರಾಮ ಬೇಲಿಗಳು ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿಯೂ ದೊರೆಯುವ ಪಸಾರೆ ದಿನಸುಗಳನ್ನು 1903—1904ನೆ ಸಾಲಿಗೆ ಜವಾಯಿಸುವ ಹಕ್ಕುದಾರಿಯು ಬಹಿರಂಗವಾದ

ಹರಾಜ್‌ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗೆ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು:—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸತಕ್ಕ ಆಫಿಸರ ಹೆಸರು.
ಕಡೂರು ...	15ನೆ ಅಕ್ಟೋಬರ್ 1903	ಅಯಾಯಾ ತಾಲ್ಲೂಕು ಹೆಡ್ ಕ್ವಾರ್ಟರ್ಸಿನಲ್ಲಿರತಕ್ಕ ಕಛೇರಿಯಲ್ಲಿ.	ಅಯಾಯಾ ತಾಲ್ಲೂಕು ಅಮಲ್ದಾರರು ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರು.
ತರೀಕೆರೆ ..	16ನೆ ಅಕ್ಟೋಬರ್ 1903		
ಯಡೆಹಳ್ಳಿ ಸಬ್ ತಾಲ್ಲೂಕು ..	17ನೆ ಅಕ್ಟೋಬರ್ 1903		
ಕೊಪ್ಪ ..	20ನೆ ಅಕ್ಟೋಬರ್ 1903		
ಮೂಡಗೆರೆ ..	22ನೆ ಅಕ್ಟೋಬರ್ 1903		
ಚಿಕ್ಕಮಗಳೂರು ..	24ನೆ ಅಕ್ಟೋಬರ್ 1903		

ಪಸಾರೆ ದಿನಸಿಗಳ ತಪಶೀಲ್.

1. ತಾರೇಕಾಯಿ, 2. ಅಂಗಡಾಳಿದಕಾಯಿ, 3. ದಿಂಡುಗದ ಗೋಂದು, 4. ಕಾಡು ಅರಿಸಿನ, 5. ಜೇನುಮೇಣ. 6. ಜೇನುತುಪ್ಪ, 7. ಕಪಿಲಾರಂಗು, 8. ಸಂಗ, 9. ಮಡ್ಡಿ, 10. ಚಿಲ್ಲದ ಬೀಜ, 11. ಹಾಲುಮಡ್ಡಿ, 12. ಚಿಗಚೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಸೂರಗದ ಕೊಂಬು, 16. ಗುಗ್ಗಳ, 17. ಬೇಲದ ಹಂಣು, 18. ಅರಗು, 19. ಶೀತಾಫಲದ ಹಂಣು, 20. ಹುಣಸೇಹಂಣು, 21. ಕಿರಿ ಈಚಲು, 22. ಕಲ್ಲುಹೂವು, 23. ಕಲ್ಲುನಾರು, 24. ಕಾಡು ಯಾಲಕ್ಕಿ, 25. ಅಳಲೇಕಾಯಿ, 26. ಶೀಗೇಕಾಯಿ, (ಚಿಕ್ಕಮಗಳೂರು ಕಡೂರು, ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ ಅಳಲೇಕಾಯಿ ಮತ್ತು ಶೀಗೆಕಾಯಿ ವಿನಹ).

2. ಚಹ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡ್ಲೆ ಇಜಾರೆ ಮೊಬಲಗು ಪೈಕಿ ನೇಕಡ 25 ರಂತೆ ಆಗುವ ಮೊಬಲಗನ್ನು ಶೇವಣಿ ಕಟ್ಟುತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಷರತ್ತು ಮೇಲೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫಾ ಹರಾಜು ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ ಮತ್ತು ಸದರಿ ಲುಕ್ಸಾನು ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ದರಖಾಸ್ತುದಾರನಿಗೆ ಹರಾಜು ಮಂಜೂರಾದ ಸಂಗತಿಯನ್ನು ತಿಳಿಸಿದ ಬಂದು ತಿಂಗಳೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನೂ ಪಾವತಿ ಮಾಡಬೇಕು. ಹಾಗೆ ಕೊಡದೆ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ಉಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ್ ಮಾಡಲಾಗುತ್ತೆ.

4. ಹರಾಜು ಮೊಬಲಗ್ಯೆ ರೂಪಾಯಿ ಬಂದರ ಬಂದಾಣೆಯಂತೆ ಲೋಕಲ್ ಸೆಸ್ ಕೊಡತಕ್ಕದ್ದು.

5. ಹಿಡುವಳಿ ಜಮೀನ್‌ಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಲವನ್ನ ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರ ವಟ್ಟು ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಿಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

8. ಹರಾಜು ಕಡೂರು ಡಿಸ್ಟ್ರಿಕ್ಟ ಡೆಪ್ಯೂಟಿ ಕಮಿಷರ್ಸರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ.

ಎಂ. ಜಿ. ರಾಮರಾವ್,
ಘೂ ಡೆಪ್ಯೂಟಿ ಕಮಿಷನರ್, ಕಡೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್.

ಇಸ್ತಿಹಾರ್ನಾಮೆ, ತಾರೀಖು 27ನೆ ಆಗಸ್ಟು 1903ನೆ ಇಸವಿ.

ಮಾರ್ಜಿನ್ನಲ್ಲಿ ನಮೂದ್ಮಾಡಿ ಇರತಕ್ಕ ಜೋಡಿ ಮತ್ತು ಖಾಯಂಗುತ್ತಾ ಗ್ರಾಮಗಳು, ಆಯಾಯ ತಾಲ್ಲೂಕುಗಳಿಗೆ ಸಮ್ಮುಖಂ ಥಪಟ್ಟ ಅಮಲ್ದಾರುಗಳ

1. ಮಾಲೂರು ತಾ॥ ಲಕ್ಕೂರು ಹೋಬಳಿ ಜೋಡೀ ಗೋಣೂರು ಗ್ರಾಮ. ಆಫೀಸಿನಲ್ಲಿ 1903ನೆ ಇಸವಿ
2. ಕೋಲಾರ ತಾ॥ ವೇಮಗಲ್ ಹೋಬಳಿ ಖಾಯಂಗುತ್ತಾ ಬಾಲನಾಗೇನಹಳ್ಳಿ ಗ್ರಾಮ. ಅಕ್ಟೋಬರ್ ಮಾಹೆ 15ನೆ
3. ಕೋಲಾರ ತಾ॥ ವೇಮಗಲ್ ಹೋಬಳಿ ಖಾಯಂಗುತ್ತಾ ಗಿರಿಜಂಪ್ಯಾಟೆ ಗ್ರಾಮ. ತಾ॥ ದಿವಸ, ಸರ್ಕಾರಕ್ಕೆ ಬರ ಬೇಕಾದ ಜೋಡಿ ಮತ್ತು ಗು

ತ್ತಾ ಮೊಬಲಗು ಬಾಕೀಗೋಸ್ಕರ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(ಹೆಚ್ಚಿನ ತಪಶೀಲ್ ಬಗ್ಯೆ 10ನೆ ಮುಕ್ತುಂ 36ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 481–479–480ನೆ ನಂಬರ್ ಪೇಜು ನೋಡತಕ್ಕದ್ದು.)

ಇಸ್ತಿಹಾರ್ನಾಮೆ, ತಾ॥ 29ನೆ ಆಗಸ್ಟು 1903ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರುವ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ 1903ನೆ ಇಸವಿ ಅಕ್ಟೋಬರು ಮಾಹೆ 15ನೆ

1. ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಜೋಡಿ ವಿಣಸಂದ್ರ ಗ್ರಾಮ. ತಾರೀಖಿನ ದಿವಸ ತಾಲ್ಲೂಕು
2. ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಜೋಡಿ ದೊಮ್ಮಲೂರು ಗ್ರಾಮ. ಅಮಲ್ದಾರ್ ಕಛೇರಿಯಲ್ಲಿ ಬ
3. ಬವರಿಂಗಪೇಟೆ ತಾಲ್ಲೂಕು ಕ್ಯಾಸಂಬಳ್ಳಿ ಹೋಬಳಿ ಖಾಯಂಗುತ್ತಾ ಪೀಲವರ ಗ್ರಾಮ. ಹಿರಂಗವಾಗಿ ಹರಾಜು ಮಾಡಿ ಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

(ಹೆಚ್ಚಿನ ತಪಶೀಲ್ ಬಗ್ಯೆ 10ನೆ ಮುಕ್ತುಂ 36ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 482–484–483ನೆ ನಂಬರ್ ಪೇಜು ನೋಡತಕ್ಕದ್ದು.)